ಚಿಂತಾಮಣಿಗೆ ಸೇರಿದ ಬಂಡಕೋಟೆ ಪಿಕ್‌ಅಪ್ ಕುರಿತು

84(161) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಂತಾಮಣಿಗೆ ಸೇರಿದ ಬಂಡಿಕೋಟೆ ಪಿಕಪ್ ಯಾವಾಗ ಕಟ್ಟಲಾಯಿತು? ಇದರ ಉದ್ದೇಶ ಮತ್ತು ರೂಪುರೇಷೆಗಳ ವಿವರ ನೀಡುವುದು;

ಆ) ಸದರಿ ಕಾಮಗಾರಿಯ ಕೆಲಸ ಇದುವರೆವಿಗೆ ಎಷ್ಟು ನಡೆದಿದೆ ಮತ್ತು ಎಷ್ಟು ಬಾಕಿ ಇದೆ? ಇದರ ಅಂದಾಜು ವಿವರಗಳನ್ನು ನೀಡುವುದು.

ಇ) ಈ ಪಿಕಅಪ್ ಕೆಳಗೆ ಇರತಕ್ಕಂತಹ ನೂರಾರು ರೈತರ ಗದ್ದೆಗಳಿಗೆ ನೀರಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಸಚಿವರು):

ಅ) ಚಿಂತಾಮಣಿಗೆ ಸೇರಿದ ಬಂಡಿಕೋಟೆ ಪಿಕಪ್ 1962-63 ರಲ್ಲಿ ಕುಶಾವತಿ ನದಿಗೆ ಅಡ್ಡವಾಗಿ ಕಟ್ಟಲಾಗಿದ್ದು ಬಂಡಿಕೋಟೆ ಮತ್ತು ನಲ್ಲಾರಶಪಲ್ಲಿ ಗ್ರಾಮದ ರೈತರ ಜಮೀನುಗಳಿಗೆ ನೀರನ್ನು ಒದಗಿಸುವುದು ಮತ್ತು ಬಂಡಿಕೋಟೆ ನಾಯಕರಾಳ ಕೆರೆಗೆ ಪಿಕಪ್‌ನಿಂದ ಪೋಷಕ ಕಾಲುವೆಯನ್ನು ನಿರ್ಮಿಸಿ ಆ ಕೆರೆಯ ಕೆಳಗಿನ ಆಟ್ಟುಕಟ್ಟುದಾರರಿಗೂ ಸಹ ನೀರನ್ನು ಒದಗಿಸುವ ಉದ್ದೇಶದಿಂದ ನಿರ್ಮಿಸಲಾಗಿರುತ್ತದೆ.

ಆ) ಈ ಪಿಕಪ್ ಕೆಲಸವು 1962-63 ರಲ್ಲಿ ರೂ.4.65 ಲಕ್ಷದ ಅದಾಜು ಮೊತ್ತದಲ್ಲಿ ಮಾಡಲಾಗಿದೆ ಎಂದು ತಿಳಿದು ಬಂದಿದೆ.

ಇ) ಈ ವಿಷಯವರು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಪಿಕಪ್‌ನ ಮುಖ್ಯ ಗೋಡೆಗಳ ದುರಸ್ತಿ, ತೂಬುಗಳ ದುರಸ್ತಿ, ಪಿಕಪ್‌ನ ರಕ್ಷಣಾ ಕೆಲಸಗಳು ಮತ್ತು ಎಡಭಾಗದ ತೂಬಿನಿಂದ ವಿತರಣಾ ನಾಲೆಗಳ ನಿರ್ಮಾಣಕ್ಕಾಗಿ ಸುಮಾರು ರೂ. 10,00 ಲಕ್ಷ ಅನುದಾನ ಬೇಕಾಗಿರುತ್ತದೆ. ಸದರಿ ಅನುದಾನದ ಲಭ್ಯತೆಯನ್ನು ಅನುಸರಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಹಿರಿಯ ಐಎಎಸ್, ಐಪಿಎಸ್, ಅಧಿಕಾರಿಗಳ ವಿದೇಶ ಪ್ರವಾಸದ ವಿವರ

6(6) ಶ್ರೀ ಎಂ.ಪಿ. ಅಪ್ಪಚ್ಚು ರಂಜನ್(ಸೋಮವಾರಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಹಿರಿಯ ಐ.ಎ.ಎಸ್ ಹಾಗೂ ಐ.ಪಿ.ಎಸ್ ಅಧಿಕಾರಿಗಳು ಕಳೆದ 2000ನೇ ವರ್ಷದಿಂದ ಇದುವರೆಗೆ ಮಾಡಿರುವ ವಿದೇಶ ಪ್ರವಾಸದ ವಿವರಗಳನ್ನು ಒದಗಿಸುವುದು?

ಆ) ಈ ವಿದೇಶ ಪ್ರವಾಸಕ್ಕಾಗಿ ರಾಜ್ಯಕ್ಕೆ ಆಗಿರುವ ಖರ್ಚು ಎಷ್ಟು? ಯಾವ ಯಾವ ಉದ್ದೇಶಕ್ಕಾಗಿ ಪ್ರವಾಸ ಕೈಗೊಂಡಿರುತ್ತಾರೆ ವಿವರ ನೀಡುವುದು.

ಇ) ಇವರುಗಳ ವಿದೇಶ ಪ್ರಯಾಣ ಭತ್ಯೆ, ದಿನಭತ್ಯೆ ಎಷ್ಟು? ಇವರಿಗೆ ಲಭ್ಯವಿರುವ ಭತ್ಯೆಗಳಲ್ಲದೆ ಹೆಚ್ಚಿಗೆ ಹಣವನ್ನು ಪಾವತಿಸಿಕೊಂಡಿರುವ ಬಗ್ಗೆ ಅಂಕಿ ಅಂಶಗಳಿವೆಯೇ?

ಈ) ಇವುಗಳ ಕುರಿತು ಆಡಿಟ್ (ಸಿಎಜಿ) ಆಕ್ಷೇಪ ವ್ಯಕ್ತಪಡಿಸಿರುವ ವಿಚಾರ ನಿಜವೇ?